**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಇ-ಆಡಳಿತ ಕೆಸ್ವಾನ್ಇತರೆ1 / 2009-10 ದಿನಾಂಕ: 01-09-2014

*"ತುರ್ತು ಗಮನಕ್ಕಾಗಿ"*

## ಸುತ್ತೋಲೆ

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ, ಡಯಟ್‌ಗಳ ಹಾಗೂ ಸಿಟಿಇ ಕಛೇರಿಗಳಲ್ಲಿ ಕೆಸ್ವಾನ್ (KSWAN- Karnataka State Wide Area Network) ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು ಸಹಕಾರ ನೀಡಲು ಹಾಗೂ ತದನಂತರ ಕೆಸ್ವಾನ್ ಸಂಪರ್ಕ ವ್ಯವಸ್ಥೆಯನ್ನು ಸದುಪಯೋಗ ಮಾಡಿಕೊಳ್ಳುವ ಬಗ್ಗೆ.

**ಉಲ್ಲೇಖ:** ಸಿಇಜಿ, ಕೆಸ್ವಾನ್ ಇವರ ಆದೇಶ ದಿನಾಂಕ:22-08-2014.

ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಛೇರಿಗಳು ಸೇರಿದಂತೆ 42 ಕಛೇರಿಗಳಿಗೆ ಕೆಸ್ವಾನ್ ವತಿಯಿಂದ ಸಂಪರ್ಕ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ. ಕೆಸ್ವಾನ್ ಸಂಪರ್ಕ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು, ಈ ಕೆಳಗೆ ನಮೂದಿಸಿದ ಸೌಲಭ್ಯಗಳನ್ನು ಉಚಿತವಾಗಿ ಪಡೆಯಬಹುದಾಗಿದೆ.

- ಇಲಾಖೆಯ ಪತ್ರ ಹಾಗೂ ಕಡತಗಳ ಚಲನವಲನದ ಮಾಹಿತಿಯ ಅನ್‌ಲೈನ್ ತಂತ್ರಾಂಶವಾದ ಶಿಕ್ಷಣವಾಹಿನಿ ತಂತ್ರಾಂಶವನ್ನು ಕೆಸ್ವಾನ್ ಸಂಪರ್ಕ ವ್ಯವಸ್ಥೆಯ ಮೂಲಕ ನಿರ್ವಹಿಸಬಹುದಾಗಿದೆ.
- ಈ ಕಛೇರಿಯಿಂದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ಇಲಾಖೆಯ ವತಿಯಿಂದ ಉಪಯೋಗಿಸುವ ಎನ್.ಐ.ಸಿ ಇ-ಮೈಲ್‌ಗಳನ್ನು ಕಳುಹಿಸಬಹುದು ಹಾಗೂ ಸ್ವೀಕರಿಸಬಹುದಾಗಿದೆ. **gmail** ಗಳನ್ನು ಉಚಿತವಾಗಿ ಕಳುಹಿಸಬಹುದು ಹಾಗೂ ಸ್ವೀಕರಿಸಬಹುದಾಗಿದೆ.
- ಶಿಕ್ಷಕರ / ಸಿಬ್ಬಂದಿಗಳ ವೇತನಕ್ಕೆ ಸಂಬಂದಿಸಿದ ಹೆಚ್.ಆರ್.ಎಂ.ಎಸ್. ತಂತ್ರಾಂಶವನ್ನು ಇಂಟರ್‌ನೆಟ್ ಸೌಲಭ್ಯ ಬದಲು ಕೆಸ್ವಾನ್ ಸಂಪರ್ಕದ ಮೂಲಕ ಯಾವುದೇ ಖರ್ಚು ಇಲ್ಲದೇ ನಿರ್ವಹಿಸಬಹುದಾಗಿದೆ.
- ಇಲಾಖಾ ವೆಬ್‌ಸೈಟ್ **www.schooleducation.kar.nic.in** ಅನ್ನು ವೀಕ್ಷಿಸಿ ಅಪಾರವಾದ ಮಾಹಿತಿ/ಸುತ್ತೋಲೆಗಳನ್ನು ಪಡೆಯಬಹುದಾಗಿದೆ.
- ಇಲಾಖೆಯ ಅವಶ್ಯಕತೆಗನುಗುಣವಾಗಿ ಇ-ಆಡಳಿತ ಘಟಕದವರು ಅಭಿವೃದ್ಧಿಪಡಿಸುವ ಎಲ್ಲಾ ತಂತ್ರಾಂಶಗಳನ್ನು ಕೆಸ್ವಾನ್ ಮೂಲಕ ಸಂಪರ್ಕ ಪಡೆದು ಮಾಹಿತಿಯನ್ನು ನೇರವಾಗಿ ತಂತ್ರಾಂಶದಲ್ಲಿ ಅಳವಡಿಸಬಹುದಾಗಿದೆ.
- ಅನ್‌ಲೈನ್ ವರ್ಗಾವಣಾ ತಂತ್ರಾಂಶದ ಮೂಲಕ ನಡೆಯುವ ಶಿಕ್ಷಕರ ಹಾಗೂ ಗ್ರೂಫ್ ಬಿ ಅಧಿಕಾರಿಗಳ ವರ್ಗಾವಣಾ ಕೌನ್ಸಿಲಿಂಗ್ ಕಾರ್ಯವನ್ನು ಕೆಸ್ವಾನ್ ಸಂಪರ್ಕ ವ್ಯವಸ್ಥೆಯನ್ನು ಉಪಯೋಗಿಸಕೊಳ್ಳಬಹುದಾಗಿದೆ.

ಈ ಎಲ್ಲಾ ಸೌಲಭ್ಯಗಳು ಉಚಿತವಾಗಿ ಲಭ್ಯವಾಗುವ ಹಿನ್ನೆಲೆಯಲ್ಲಿ, ಇಲಾಖೆಯ ವತಿಯಿಂದ ಕೆಸ್ವಾನ್‌ರವರಿಗೆ ಇಲಾಖೆಯ ಎಲ್ಲಾ ಡಯಟ್‌ಗಳಿಗೆ/ಸಿಟಿಇಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಕೆಸ್ವಾನ್ ಸಂಪರ್ಕ ವ್ಯವಸ್ಥೆಯನ್ನು ಅಳವಡಿಸಲು ಕೋರಲಾಗಿತ್ತು, ಈಗ ಸದರಿ ಸೌಲಭ್ಯವನ್ನು ನೀಡುವ ಸಲುವಾಗಿ ತಮ್ಮ ಕಛೇರಿಯನ್ನು ಕೆಸ್ವಾನ್ ಸಂಸ್ಥೆಯವರು ಸಂಪರ್ಕಿಸಲಿದ್ದು, ಈ ಸಂದರ್ಭದಲ್ಲಿ ಅವಶ್ಯಕವಾಗಿ ಬೇಕಾಗಿರುವ ಎಲ್ಲಾ ಸಹಕಾರವನ್ನು ನೀಡತಕ್ಕದ್ದು.

**ಕೆಸ್ವಾನ್ ಸಂಪರ್ಕ ವ್ಯವಸ್ಥೆಯನ್ನು ಪಡೆದು, ಕಡ್ಡಾಯವಾಗಿ ಕೆಸ್ವಾನ್ ಸಂಪರ್ಕ ವ್ಯವಸ್ಥೆಯನ್ನು ಬಳಸಲು ಹಾಗೂ ತಮ್ಮ ಕಛೇರಿಯಲ್ಲಿ ಕೆಸ್ವಾನ್ ಸಂಪರ್ಕ ವ್ಯವಸ್ಥೆಯ ಕಾರ್ಯ ಸಂಪೂರ್ಣವಾಗಿ, ಕಾರ್ಯನಿರ್ವಹಣೆಗೆ ಸಿದ್ಧವಾದ ದಿನಾಂಕವನ್ನು ಈ ಕಛೇರಿಗೆ ತಪ್ಪದೇ ವರದಿಯನ್ನು ನೀಡಲು ಈ ಮೂಲಕ ಸೂಚಿಸಿದೆ.**

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ
**ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಡಯಟ್ ಪ್ರಾಂಶುಪಾಲರುಗಳಿಗೆ, ಸಿಟಿಇ ಪ್ರಾಂಶುಪಾಲರುಗಳಿಗೆ**
**ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ**

ಪ್ರತಿಯನ್ನು

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ನೀಡಿದೆ.
2. ಪ್ರಧಾನ ಕಾರ್ಯದರ್ಶಿಗಳು, ಇ-ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ನೀಡಿದೆ.

3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ನೀಡಿದೆ.
4. ನಿರ್ದೇಶಕರು, ಡಿಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ
5. ಅಪರ ಆಯುಕ್ತರು, ದಾರವಾಡ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ
6. ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ
7. ಕಛೇರಿ ಪ್ರತಿ.